**ದಿನಾಂಕಃ 24.09.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ಮತ್ತು 2 ವಾದಿಗಳ ಪರ ಶ್ರೀ ಎನ್ ಎಮ್ ವಕೀಲರಿಂದಃ**

ನನಗೆ ಕನ್ನಡ ಮತ್ತು ಆಂಗ್ಲ ಭಾಷೆ ಓದಲು ಮತ್ತು ಬರೆಯಲು ಬರುತ್ತದೆ ನಾನು ಬಿ ಕಾಂ ಪದವಿದರೇ. ನಾನು 10 ವರ್ಷದಿಂದ ಬ್ಯಾಂಕನಲ್ಲಿ ಕೆಲಸಮಾಡುತ್ತಿದ್ದೇನೆ. ನನಗೆ ಬ್ಯಾಂಕನ ಕಾನೂನು ಮತ್ತು ಪ್ರೊಸಿಜರಗಳ ಬಗ್ಗೆ ಗೊತ್ತಿದೆ. ನಿಮಗೆ ನ್ಯಾಯಲಾಯದಿಂದ ಬಂದಿದ್ದ ಸಮನ್ಸ ಇದೇಯೇ ಎಂದರೆ ನಮ್ಮ ಬ್ಯಾಂಚ್ ಮಾನ್ಯೇಜರಗೆ ಸಮನ್ಸ ಬಂದಿತ್ತು ಅವರು ನನ್ನನ್ನು ಕಳುಹಿಸಿದ್ದರು. ಬ್ಯಾಂಕನಲ್ಲಿ ಪೂರ್ತಿ ದಿನ ನಿಮಗೂ ಕೆಲಸ ಇರುತ್ತದೆ ಎಂದರೆ ಹೌದು. ನೀವು ಸಹ ನಿಮ್ಮ ಮಾನೇಜರನಂತೆ ನಿಮ್ಮ ಕೆಲಸದಲ್ಲಿ ಬ್ಯಾಂಕನಲ್ಲಿ ಬ್ಯುಸಿ ಇರುತ್ತೀರಿ ಎಂದರೆ ಹೌದು. ನೀವು ನಿಮ್ಮ ಬ್ಯಾಂಚ್ನ ಮಾನ್ಯೇಜರನಿಂದ ಅವರ ಪರವಾಗಿ ಸಾಕ್ಷಿ ನೀಡಲು Authorization Letter ಪಡೆದುಕೊಂಡಿದ್ದೀರಿ ಎಂದರೆ ನನಗೆ ಮೌಖಿಕವಾಗಿ ಹೇಳಿದ್ದರು, ಲಿಖಿತವಾಗಿ ಏನು ಪಡೆದುಕೊಂಡಿಲ್ಲ.

ನಿಮ್ಮ ನೇಮಕಾತಿಯಲ್ಲಾಗಲಿ ಅಥವಾ ನಿಮ್ಮ ಬ್ಯಾಂಕನ ಯಾವುದೇ ಕಾನೂನಲ್ಲಾಗಲಿ ಮ್ಯಾನೇಜರ ಪರವಾಗಿ ಸಾಕ್ಷಿ ನೀಡಲು ನಿಮಗೆ ಅವಕಾಶ ಇದೇಯೇ ಎಂದರೆ ಇಲ್ಲ. ನಿಮ್ಮ ಬ್ಯಾಂಕನಲ್ಲಿ ಯಾರಾದರು ವ್ಯಕ್ತಿ ಹೊಸದಾಗಿ ಖಾತೆ ತೆರೆಯವಾಗ ಯಾವ ದಾಖಲೆಗಳನ್ನು ಪಡೆದುಕೊಳ್ಳುತ್ತೀರಿ ಎಂದರೆ ಅರ್ಜಿ(Account opening Form), ಕೆ.ವೈ.ಸಿ ( ಕೆ ವೈ ಸಿ ಯಲ್ಲಿ ಆದಾರ ಕಾರ್ಡ, ಪ್ಯಾನ ಕಾರ್ಡ ಎಲ್ಲ ಬರುತ್ತದೆ). ಸದರಿ ದಾಖಲೆಗಳನ್ನು ವ್ಯಕ್ತಿಯ ಗುರುತಿಗಾಗಿ ಮತ್ತು ವಿಳಾಸದ ಗುರುತಿಗಾಗಿ ಪಡೆದುಕೊಳ್ಳುತ್ತೀರಿ ಎಂದರೆ ಸರಿ. ಸದರಿ ದಾಖಲೆಗಳನ್ನು ಎಷ್ಟು ದಿನ ನೀವು ಇಟ್ಟು ಕೊಳ್ಳುತ್ತೀರಿ ಎಂದರೆ ಅದನ್ನು ನಾವು LCPC( Liability Central Processing Centre) ಗೆ ಕಳುಹಿಸಿಕೊಡುತ್ತೇವೆ. ಅಲ್ಲಿ ಅವರು ಆ ದಾಖಲೆಗಳನ್ನು ಅದರ ಮೂಲ ರೂಪದಲ್ಲಿ ಮತ್ತು ಡಾಟಾ ಬೇಸನಲ್ಲಿ ಇಡುತ್ತಾರೆ.

ಈ ಕೇಸನಲ್ಲಿ ನೀವು ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಯಾವ ಕಾರಣಕ್ಕೆ ಇಲ್ಲ ಎಂದು ಹೇಳಿದ್ದೀರಿ ಎಂದರೆ LCPC ಬ್ಯಾಕ ಆಫ್ ಇಲ್ಲದಿರುವ ಕಾರಣ ಎಂದು ಹೇಳಿದ್ದೇನೆ. ಯಾವ ಕಾರಣಕ್ಕೆ LCPC ಅಲ್ಲಿ ಬ್ಯಾಕ ಆಫ್ ಇಲ್ಲ ಎಂದು ಹೇಳಿದ್ದಾರೆ ಎಂದರೆ ನನಗೆ

ಗೊತ್ತಿಲ್ಲ. ನೀವು LCPC ಯಲ್ಲಿ ಬ್ಯಾಕ ಆಫ್ ಯಾವ ಕಾರಣಕ್ಕೆ ಇಲ್ಲ ಎಂದು ತಿಳಿದುಕೊಳ್ಳಲು ಪ್ರಯತ್ನ ಮಾಡಿದ್ದೀರಾ ಎಂದರೆ ಅವರು ಇಲ್ಲ ಎಂದು ಮೇಲ್ ಹಾಕಿದ ನಂತರ ನಾವು ಸುಮ್ಮನೆ ಆಗಿದ್ದೇವು. ಯಾವ ಕಾರಣಕ್ಕೆ LCPC ನಲ್ಲಿ ಇಲ್ಲ ಎಂದು ನೀವು ತಿಳಿದುಕೊಳ್ಳಲು ಪ್ರಯತ್ನಿಸಲಿಲ್ಲ ಎಂದರೆ ಇಲ್ಲ.

ಪ್ರಶ್ನೆಃ ನಿಮ್ಮ ಪ್ರಮಾಣಪತ್ರದಲ್ಲಿ ಹೇಳಿರುವ Unfortunately ಎಂಬ ಕಾರಣ ಸಕಾರಣವಲ್ಲ ?

ಉತ್ತರಃ ನಾವು ತಿಳಿದುಕೊಳ್ಳುವ ಪ್ರಯತ್ನ ಮಾಡಬೇಕಿತ್ತು ಆದರೆ ಮಾಡಿಲ್ಲ.

ನೀವು ಪಡೆದುಕೊಂಡ ಕಡೆಯ ಮೇಲ್ ನಲ್ಲಿ LCPC ಡಾಟಾ ಬೇಸ್ ನಲ್ಲಿ ಇಲ್ಲ ಎಂದು ಬರೆದಿದೆ ಎಂದರೆ ಸರಿ. LCPC ಡಾಟಾ ಬೇಸ್ ನಲ್ಲಿ ಇಲ್ಲ ಎಂದರೆ ಅವರ ಬಳಿ AOF(Account opening form) ನ ಸಾಫ್ಟ ಕಾಫಿ ಇಲ್ಲ ಎಂದು ಅರ್ಥ ಎಂದರೆ ಸರಿ. ಅದರಲ್ಲಿ ಮೂಲ/ Physical AOF(Account opening form) ಇಲ್ಲ ಎಂದು ಹೇಳಿಲ್ಲ ಹಾಗಾದರೆ Physical AOF ಎಲ್ಲಿದೆ ಎಂದರೆ ನಮ್ಮ ಬಳಿ ಮತ್ತು LCPC ಬಳಿ ಮೂಲ/ Physical AOF(Account opening form) ಇಲ್ಲ. ಯಾವ ಕಾರಣಕ್ಕೆ ನಿಮ್ಮ ಬಳಿ

ಮೂಲ/Physical AOF(Account opening form) ಇಲ್ಲ ಎಂದರೆ ನನಗೆ ಗೊತ್ತಿಲ್ಲ.

ಯಾವುದೇ ವ್ಯಕ್ತಿ ಖಾತೆಯನ್ನು ಮುಚ್ಚುವಾಗ ಯಾವ ದಾಖಲೆಗಳನ್ನು ಪಡೆದುಕೊಳ್ಳುತ್ತೀರಿ ಎಂದರೆ ರಿಕ್ವೆಸ್ಟ ಫಾರ್ಮ್ ರಿಕ್ವೆಸ್ಟ ಲೇಟರ್ ಪಡೆದುಕೊಳ್ಳುತ್ತೇವೆ. ಅವರೆ ಖಾತೆದಾರರು ಎಂದು ತಿಳಿದುಕೊಳ್ಳಲು ಯಾವ ದಾಖಲಾತಿಯನ್ನು ಪಡೆದುಕೊಳ್ಳುತ್ತೀರಿ ಎಂದರೆ ಅವರ ಸಹಿಯನ್ನು ನಮ್ಮ ಸಿಸ್ಟಮ್ ನಲ್ಲಿ ಚೆಕ್ ಮಾಡುತ್ತೇವೆ. ಖಾತೆ ಮುಚ್ಚಿ ದ ನಂತರ ರಿಕ್ವೆಸ್ಟ ಫಾರ್ಮ್ ರಿಕ್ವೆಸ್ಟ ಲೇಟರ್ 2 ನ್ನು ಎಲ್ಲಿಗೆ ಕಳುಹಿಸುತ್ತೀರಿ ಎಂದರೆ ರೆಕಾರ್ಡ ರೂಮಂ ಗೆ ಕಳುಹಿಸುತ್ತೇವೆ. ಈ ಕೇಸನಲ್ಲಿ ಪ್ರತಿವಾದಿ ಜೂನ್ 2017 ರಲ್ಲಿ ಖಾತೆ ಮುಚ್ಚಿರುತ್ತಾರೆ ಆ ಸಂಬಂಧ ರಿಕ್ವೆಸ್ಟ ಫಾರ್ಮ್ ಮತ್ತು ರಿಕ್ವೆಸ್ಟ ಲೇಟರ್ ನ್ನು ಎಲ್ಲಿ ಕೇಳಬೇಕೆಂದು ನಮ್ಮ DAC( Document Archival Centre) ಗೆ ಕಳುಹಿಸುತ್ತೇವೆ ಅಲ್ಲಿ ಸಿಗಬಹುದು.

ನಿಮ್ಮ ಬ್ಯಾಂಕಿಂಗ್ ಕಾನೂನು ಪ್ರಕಾರ Purged ಎಂದರೆ ಏನು ಎಂದರೆ ನನಗೆ ಗೊತ್ತಿಲ್ಲ ಮತ್ತು ದಿಃ01.06.2024 ರಂದು 17.45 ನಿಮಿಷಗಳಿಗೆ ಕಳುಹಿಸಿರುವ ಮೇಲ್ ಬಗ್ಗೆ ನನಗೆ ತಿಳಿದಿಲ್ಲ.

ದಿಃ03.06.2024 ರಂದು 4.30 ಘಂಟೆಗೆ ಕಳುಹಿಸಿರುವ ಮೇಲ್ ಯಾರಿಗೆ ಬಂದಿದೆ ಎಂದರೆ ನಮ್ಮ ಬ್ರ್ಯಾಂಚ್ ಗೆ ಬಂದಿದೆ. ಆ ಮೇಲ್ ನ ಪ್ರಕಾರ ನಿಮ್ಮ ಲಾ ಆಫೀಸರ್ ದಾಖಲೆಗಳನ್ನು ಹಾಜರು ಪಡಿಸಲು ಹೇಳಿದ್ದಾರೆ ಎಂದರೆ ಹೌದು.

ನೀವು LCPC ನಲ್ಲಿ ಕೆಲಸ ಮಾಡಿದ್ದೀರಾ ಮತ್ತು ಆ ಬಗ್ಗೆ ಟ್ರೆನಿಂಗ್ ನೀಡಿದ್ದೀರಾ ಎಂದರೆ ಸ್ವಲ್ಪ ದಿನಗಳ ಕಾಲ ಅಂದರೆ ಸುಮಾರು 1 ವರ್ಷ ಕೆಲಸ ಮಾಡಿದ್ದೇನೆ. LCPC ಯಲ್ಲಿ ದಾಖಲೆಗಳನ್ನು Primary, secondary, Back up site, Offline tapes ಪ್ರಕಾರ ಸೊಟೇರ ಮಾಡಿರುತ್ತಾರೆ ಎಂದರೆ ನನಗೆ ಅದರ ಬಗ್ಗೆ ತಿಳಿದಿಲ್ಲ. Primary, secondary, Back up site, Offline tapes ಗಳಲ್ಲಿ ಸ್ಟೋರ ಆಗಿದ್ದರೆ ಡಾಟಾ Purged ಆಗಿದೆ ಎಂದು ಆದಾಗ Retrieve ಮಾಡಬಹುದು ಎಂದರೆ ಹೌದು. LCPC ಅವರು Retrieve ಮಾಡಲು ಪ್ರಯತ್ನ ಮಾಡಿರುವ ಬಗ್ಗೆ ನಿಮಗೆ ಮೇಲ್ ಬಂದಿಲ್ಲ ಎಂದರೆ ಅವರು Not available ಎಂದು ಕಳುಹಿಸಿದ್ದಾರೆ ಎಂದರೆ ಪ್ರಯತ್ನ ಮಾಡಿದ್ದಾರೆ ಎಂದು ಅರ್ಥ.

CIF ( customer Identification file) ಗೊತ್ತಿದೆ. CIF ನಲ್ಲಿ DCI ( Digital customer Identification) ಇರುತ್ತದೆ ಎಂದರೆ ಸರಿ. ಸದರಿ

ವಿಚಾರ ಎಸ್ ಬಿ ಆಯ ಮುಖ್ಯ ಸರ್ವರನಲ್ಲಿ ಸೇವ್ ಆಗಿರುತ್ತದೆ ಎಂದರೆ ಹೌದು. LCPC ಇಲ್ಲ ಎಂದರೆ ಮುಖ್ಯ ಸರ್ವರನಲ್ಲಿ Retrieve ಮಾಡಬುಹುದು ಎಂದರೆ ಅಲ್ಲಿಯೂ ಅವರೇ ಪ್ರಯತ್ನ ಮಾಡಿರುತ್ತಾರೆ. ಆ ಬಗ್ಗೆ ನಿಮಗೆ ದಾಖಲೆ ಕೊಟ್ಟಿದ್ದೀರಾ ಎಂದರೆ ಇಲ್ಲ. ಆ ಬಗ್ಗೆ ಯಾವುದೆ ಕಮ್ಯುನಿಕೇಷನ ಇಲ್ಲ.

ಖಾತೆ ಮುಚ್ಚಿದ ಮೇಲೆ ನಿಮ್ಮ ಬ್ಯಾಂಕಿಂಗ್ ಕಾನೂನು ಪ್ರಕಾರ ಎಷ್ಟು ವರ್ಷ ದಾಖಲೆಗಳನ್ನು ಇಡಬೇಕು ಎಂದರೆ 7 ವರ್ಷ ಇಡಬೇಕು. Banker evidence Act ಪ್ರಕಾರ ಖಾತೆ ಮುಚ್ಚಿದ ಮೇಲೆ 10 ವರ್ಷ ದಾಖಲೆಗಳನ್ನು ಇಡಬೇಕು ಎಂದರೆ ಸರಿ. ಆದ್ದುದರಿಂದ ಬ್ಯಾಂಕ ಸ್ಟೇಟಮೆಂಟ ನಿಮ್ಮ ಬಳಿ ಇದೆಯೇ ಎಂದರೆ ಸರಿ. ನಿಮ್ಮ ಬಳಿ AOF(Account opening form) ಮತ್ತು ಕೆ ವೈ ಸಿ ದಾಖಲೆಗಳು ಇದ್ದರೂ ಸಹ ಸರಿಯಾಗಿ ಹೂಡಕದೆ ನ್ಯಾಯಲಯದ ಮುಂದೆ ದಾಖಲೆಗಳು ಇಲ್ಲಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಈಗಲೂ ನೀವು ಪ್ರಯತ್ತನ ಮಾಡಿದರೂ ಸಹ ದಾಖಲೆಗಳನ್ನು ಹುಡುಕಿ Retrieve ಮಾಡಿ ನ್ಯಾಯಾಲಯಕ್ಕೆ ಹಾಜರು ಪಡಿಸಬಹುದು ಎಂದರೆ ನಮ್ಮ ಬಳಿ ದಾಖಲೆಗಳು ಇಲ್ಲ. ಬ್ಯಾಂಕ ಪರವಾಗಿ ನೀವು ಸಾಕ್ಷಿ ನೀಡಲು

ಯಾವುದೇ ಹಕ್ಕು ಇರದ ಕಾರಣ ನೀವು ನೀಡಿರುವ ಸಾಕ್ಷಿ ಊರ್ಜಿತವಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

(ನಿಶಾ ರಾಣಿ ಎ. ಸಿ)
III ನೇ ಎ.ಸಿ.ಸಿ & ಎಸ್.ಜೆ,
ಬೆಂಗಳೂರು.